ಕರ್ನಾಟಕ ವಿಧಾನಸಭೆ

ಗುರುವಾರ 26ನೇ ಮಾರ್ಚ್1998ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ: 10- 10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು

1) ಸಂತಾಪ ಸೂಚನೆ

ಅಧ್ಯಕ್ಷರು :- ಮಾಜಿ ಶಾಸಕರಾದ ಶ್ರೀ ವಿ. ಎನ್. ಪಾಟೀಲ್ ಅವರು ನಿಧನರಾದುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

ಮಾಜಿ ಶಾಸಕರಾದ ಶ್ರೀ ವಿ. ಎನ್. ಪಾಟೀಲ್ ಅವರು ದಿನಾಂಕ 13ನೇ ಮಾರ್ಚ್ 1927 ರಂದು ಬೀದರ್ ಜಿಲ್ಲೆ, ಹುಮ್ನಾಬಾದ್ ತಾಲ್ಲೂಕ್, ಮೀನ್‌ಕೇರಿ ಎಂಬಲ್ಲಿ ಜನಿಸಿದರು. ಶ್ರೀಯುತರು ಹುಮ್ನಾಬಾದ್ ವಿಧಾನಸಭಾ ಕ್ಷೇತ್ರವನ್ನು 4ನೇ ಮತ್ತು 5ನೇ ವಿಧಾನ ಸಭೆಯನ್ನು ಪ್ರತಿನಿಧಿಸಿದ್ದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಇವರು ಬೀದರ್ ಜಿಲ್ಲೆಯ ಏಕೈಕ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದವರು. 1946-48 ರಲ್ಲಿ ರಜಾಕರ್ ಮೂವ್‌ಮೆಂಟನ್ನು ವಿರೋದಿಸಿದ್ದ ಇವರು ಹೈದರಾಬಾದ್ ರಾಜ್ಯವನ್ನು ವಿಭಜಿಸಿ ಹೈದರಾಬಾದ್ -ಕರ್ನಾಟಕ ಪ್ರಾಂತ್ಯವನ್ನು ರಚಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಶ್ರೀಯುತರು ತಮ್ಮ 70ನೇ ವಯಸ್ಸಿನಲ್ಲಿ ತಮ್ಮ ಸ್ವಗ್ರಾಮವಾದ ಮೀನ್‌ಕೇರಿಯಲ್ಲಿ ದಿನಾಂಕ 24. 3. 98 ರಂದು ನಿಧನರಾದರು. ಆದ್ದರಿಂದ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮೌನವನ್ನು ಆಚರಿಸಿದ ನಂತರ)

ಅಧ್ಯಕ್ಷರು :- ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

2. ವಿತ್ತೀಯ ಕಾರ್ಯಕಲಾಪ

1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ (ಮುಂದುವರೆದುದು)

★ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೆ, 4ನೇ ವರ್ಷದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಈ ರಾಜ್ಯದ ಬಡ್ಜೆಟ್ ಅನ್ನು ಇಟ್ಟಿದ್ದಾರೆ. ಆಯವ್ಯಯವನ್ನು ಮಂಡಿಸುವಾಗ ಸಾಮಾನ್ಯವಾಗಿ ಸರಕಾರ ಒಂದು ನಿರ್ದಿಷ್ಟವಾದಂತಹ ಗುರಿ ಇಟ್ಟು ಆಯವ್ಯಯವನ್ನು ಮಂಡಿಸುತ್ತದೆ. ಆದರೆ, ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿರತಕ್ಕಂತಹ 1998-99ನೇ ಆಯವ್ಯಯದಲ್ಲಿ ಯಾವುದೇ ಒಂದು ಗೊತ್ತು ಗುರಿ ಇದೆ ಎಂದು ನನಗೆ ಅನ್ನಿಸುತ್ತಿಲ್ಲ. ಗೊತ್ತು ಗುರಿ ಇಲ್ಲದೇ ಇರತಕ್ಕಂತಹ ಬಡ್ಜೆಟ್ಟನ್ನು ಮಂಡಿಸಿ ಈ ರಾಜ್ಯವನ್ನು ಯಾವ ರೀತಿ ಅಭಿವೃದ್ಧಿ ಪಡಿಸಬೇಕೆಂದು ಹೊರಟಿದ್ದಾರೆಂದು - ಹೇಳತಕ್ಕಂಥಾದ್ದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಿದ್ಧರಾಮಯ್ಯನವರಂತಹ ಹಣಕಾಸು ಮಂತ್ರಿಗಳು ಈ ರಾಜ್ಯದಲ್ಲಿನ ಸಮಸ್ಯೆಗಳ ಬಗ್ಗೆ ರಾಜ್ಯದ ಆರ್ಥಿಕ ಬೆಳವಣಿಗೆ ಮತ್ತು ಈ ರಾಜ್ಯದ ಅಭಿವೃದ್ಧಿ ಬಗ್ಗೆ